ಸಲ್ಲಿಸಲಾಗಿದ್ದು ಮತ್ತೆ ೨೩-೧೦-೮೬ ರಿಂದ ಪ್ರಾರಂಭಿಸಲಾಗಿದೆ. ಇದಕ್ಕಾಗಿ ತಗುಲಿದ ವೆಚ್ಚ ರೂ. ೩೬,೬೬೩-೫೫ ಮಾತ್ರ.

ಈ) ೨-೧೨-೮೯ರಂದು.

ಉ) ಬರ ಪರಿಹಾರ ಕಾಮಗಾರಿ ೧೯೮೫-೮೬ರಲ್ಲಿ ಒಂದು ತೆರೆದ ಬಾವಿಯನ್ನು ತೆಗೆದು ಕೊಳ್ಳಲು ಭೂ ಸೇನಾ ನಿಗಮ ಬೈಲಹೊಂಗಲಕ್ಕೆ ತಿಳಿಸಲಾಗಿತ್ತು. ೧೯೮೬-೮೭ನೇ ಸಾಲಿನಲ್ಲಿ ರೂ. ೧೮ ೮೦೦-೦೦ಗಳನ್ನು ಮೊದಲನೇ ಕಂತಾಗಿ ಕೊಡಲಾಯಿತು. ೩-೨ ೮೭ರಲ್ಲಿ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಮತ್ತು ಭೂ ಶಾಸ್ತ್ರಜ್ಞರು ಎರಡು ಸ್ಥಳಗಳನ್ನು ಗುರುತು ಮಾಡಿದರು. ೨೪-೧೨-೮೭ರಲ್ಲಿ ಡಿ.ಡಿ.ಸಿ. ಸಭೆಯಲ್ಲಿ ಕೆಲಸವನ್ನು ಶೀಘ್ರವಾಗಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಭೂ-ಸೇನಾ ನಿಗಮದವರಿಂದ ಯೋಜನೆ ಮತ್ತು ನಕ್ಷೆಗಳು ತಯಾರಾಗುತ್ತಿವೆ.

ಊ) ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಕಾರ್ಯಕ್ರಮ ಪ್ರಾರಂಭ ಮಾಡಿದ್ದಾರೆ.

ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳ ಬಗ್ಗೆ

೬೩೮. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಮಹಾನಗರ ಹದ್ದಿನಲ್ಲಿ ಕಿತ್ತೂರು ಚೆನ್ನಮ್ಮ ರಾಣಿಯೊಂದಿಗೆ ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು (ಸಿಮೆಟ್ರಿ) ಇರುವುದರ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಐತಿಹಾಸಿಕ ಮಹತ್ವದ ಈ ಅವಶೇಷಗಳ ರಕ್ಷಣೆಯ ವಿಚಾರವಾಗಿ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮಾಲ್ಕಿ ವಟನ್ ಮಾರ್ಕೆಟ್ ಪೂರ್ವ ಭಾಗಕ್ಕೆ ಹೊಂದಿಕೊಂಡಿರುವ ಕ್ರಿಶ್ಚಿಯನ್ ಬರಿಯಲ್ ಗ್ರೌಂಡ್ (ಸ್ಮಶಾನ)ದಲ್ಲಿ ಹಿಂದಿನ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು ಇದ್ದು ಅದರಲ್ಲಿ ಫ್ಯಾಕರೆ ಅಧಿಕಾರಿಯ ಸಮಾಧಿಯೂ ಇರುತ್ತದೆ.

ಆ) ಮಹಾನಗರ ಸಭೆಯಿಂದ ಈ ಸಮಾಧಿಗಳ ಸಂರಕ್ಷಣೆಗಾಗಿ ಅದರ ಸುತ್ತಲೂ ಆವರಣ ಗೋಡೆಯನ್ನು ಸನ್ ೧೯೮೭-೮೮ರಲ್ಲಿ ರೂ. ೫೧೦೩-೦೦ ಖರ್ಚು ಮಾಡಿ ದುರಸ್ತಿ ಮಾಡ ಲಾಗಿದೆ. ಸದರಿ ಜಾಗದ ಸ್ವಚ್ಛತೆಯನ್ನು ಸಹ ಕಾಯ್ದುಕೊಂಡು ಹೋಗಲಾಗುತ್ತಿದೆ.

ಸುಬ್ರಮಣ್ಯ ನಗರದ ಕೆರೆ ಅಂಗಳದ ಬಗ್ಗೆ

೬೩೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಕ್ಷೇತ್ರದಲ್ಲಿರುವ ಸುಬ್ರಮಣ್ಯ ನಗರ (ಮಿಲ್ಕ್ ಕಾಲೋನಿ) ಕೆರೆ ಅಂಗಳದ ಪ್ರದೇಶವನ್ನು ಖಾಸಗಿಯವರು ತಮ್ಮದೇ ಎಂದು ಹೇಳಿ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಈ ಎರಡು ಭಾಗಗಳನ್ನು ಮೈದಾನ ಮತ್ತು ಪಾರ್ಕ್‌ಗಳಾಗಿ ಮಾಡಬೇಕೆಂದು ಹಲವಾರು ವರ್ಷಗಳಿಂದ ಶಾಸಕರೂ, ಅಲ್ಲಿನ ಜನರು ಒತ್ತಾಯಿಸುತ್ತಿರುವುದು ನಿಜವೇ?

ಆ) ಈ ತಡೆಯಾಜ್ಞೆಯನ್ನು ಖಾಲಿ ಮಾಡಲು ನಗರಪಾಲಿಕೆಯವರಾಗಲೀ ಅಥವಾ ಸರ್ಕಾರದವರಾಗಲೀ ಕೈಗೊಂಡಿರುವ ಕ್ರಮಗಳೇನು?

ಈ) ಕೆರೆ ಅಂಗಳವನ್ನು ತಮ್ಮದಾಗಿಯೇ ಮಾಡಿಕೊಳ್ಳಬೇಕೆಂದು ಕೆಲವು ಸ್ವಾರ್ಥ ಸಾಧಕರು ಮಹಾನಗರಪಾಲಿಕೆಯ ಕೆಲವು ಅಧಿಕಾರಿಗಳೂ ಶಾಮೀಲಾಗಿರುವುದು ತಿಳಿದಿದೆಯೇ?

ಉ) ಜನತೆಯ ಹೇಳಿಕೆಗಳನ್ನು ಈಡೇರಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ನಿಜ.

ಇ) ಈ ದಾವೆಯಲ್ಲಿ ಮಹಾನಗರ ಪಾಲಿಕೆಯು ತಮ್ಮ ನಿಲುವಿನ ಸಮರ್ಥನೆ ಮಾಡಿ ಹೇಳಿಕೆ (ಡಿಫೆನ್ಸ್ ಸ್ಟೇಟ್‌ಮೆಂಟ್)ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ತಡೆಯಾಜ್ಞೆಯನ್ನು ತೆರವು ಮಾಡಲು ಅರ್ಜಿ ಸಲ್ಲಿಸಿತ್ತು. ಆದರೆ ನ್ಯಾಯಾಲಯವು ತನ್ನ ಆಜ್ಞೆಯನ್ನು ಪೂರ್ಣಾಟು ಮಾಡಿ ಮಹಾನಗರ ಪಾಲಿಕೆಯವರು ಈ ಪ್ರದೇಶದಲ್ಲಿರುವ ರಸ್ತೆಗಳನ್ನು ರಿಪೇರಿ ಮಾಡಲು ಮಾತ್ರ ಅವಕಾಶ ಮಾಡಿಕೊಟ್ಟಿರುತ್ತಾರೆ.

ಈ) ಗಮನಕ್ಕೆ ಬಂದಿಲ್ಲ.

ಉ) ದಾವೆಯು ನ್ಯಾಯಾಲಯದಲ್ಲಿ ಮುಗಿದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅಗ್ರಾಹಾರ ದಾಸರಹಳ್ಳಿ ಬಗ್ಗೆ

*೫೫೩. ಶ್ರೀ ಎಂ. ಎಸ್ ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರ ಅಗ್ರಹಾರ ದಾಸರಹಳ್ಳಿ ಕೆರೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯವರು ಕೊಳಚೆ ನೀರನ್ನು ಬಿಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಇದರಿಂದಾಗಿ ಸೊಳ್ಳೆಯ ಕಾಟ ಜನರಿಗೆ ಅನಾರೋಗ್ಯ ಇತ್ಯಾದಿಗಳಾಗುತ್ತಿರುವುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿಲ್ಲವೆ ?

ಇ) ಈ ಕೆರೆಯ ಕೊಳಚೆ ನೀರನ್ನು ಹೊರಕ್ಕೆ ತೆಗೆದು ಈ ಖಾಲಿ ಜಾಗದಲ್ಲಿ ಆಟದ ಮೈದಾನ ಮತ್ತು ಪಾರ್ಕ್‌ಗಳನ್ನು ಮಾಡಬೇಕೆಂದು ಅನೇಕ ವರ್ಷಗಳಿಂದ ಜನ ಮತ್ತು ಶಾಸಕರು ಕೇಳುತ್ತಿಲ್ಲವೆ ?

ಈ) ಬೆಂಗಳೂರು ಮಹಾನಗರ ಪಾಲಿಕೆಯವರು ಕೆರೆಯ ನೀರನ್ನು ಹೊರಕ್ಕೆ ತೆಗೆಯಬೇಕೆಂಬ ನಿರ್ಧಾರಕ್ಕೆ ಬಂದು ಆದೇಶವನ್ನೇನಾದರೂ ನೀಡಿದ್ದಾರೆಯೇ ?

ಉ) ಮೇಲಿನ ಕೇಳಿಕೆಯನ್ನು ಈಡೇರಿಸಲು ಸರ್ಕಾರದವರು ಕೈಗೊಳ್ಳುವ ಕಾರ್ಯಕ್ರಮಗಳೇನು ?